# ಆಕರ್ಷಕ, ಆರಾಮದಾಯಕ ಟ್ರೌಸರ್



ಇಂದಿನ ಫ್ಯಾಷನ್ ಜಗತ್ತು ಆಕ್ರಮಿಸಿರುವುದು ವಿವಿಧ ಬಗೆಯ ಟ್ರೌಸರ್‌ಗಳನ್ನು. ಸೀರೆ, ಸಲ್ವಾರ್ ಫ್ಯಾಷನ್ ಅನ್ನೂ ಬದಿಗಿಟ್ಟು ಇದೀಗ ಹಿಪ್ಪಿ, ಡಾಟೆಡ್, ಪೋಲ್ಕಾ, ಟ್ಯಾಪರ್ಡ್, ಪಲಾಜೊ ಮುಂತಾದ ಟ್ರೌಸರ್‌ಗಳು ಟ್ರೆಂಡಿಯಾಗಿದ್ದು, ಮಹಿಳೆಯರಿಗೆ ಸಖತ್ ಇಷ್ಟವಾಗುತ್ತಿದೆ.

**■ ಸುಲಭಾ ಆರ್. ಭಟ್**

ಕಾಲಕ್ಕೆ ತಕ್ಕಂತೆ ಫ್ಯಾಷನ್‌ನಲ್ಲೂ ಬದಲಾವಣೆಯಾಗುತ್ತದೆ. ಉಡುಪುಗಳ ಲೋಕವೇ ಹಾಗೆ. ಹಿಂದೆಲ್ಲಾ ಚೂಡಿದಾರ್, ಲಂಗ ಬ್ಲೌಸ್, ಸಲ್ವಾರ್, ಸೀರೆಯನ್ನೇ ಮಹಿಳೆಯರು ಧರಿಸುತ್ತಿದ್ದರೆ ಇದೀಗ ಟ್ರೌಸರ್‌ಗಳು ಫ್ಯಾಷನ್‌ಪ್ರಪಂಚದಲ್ಲಿ ಪ್ರಮುಖ ಸ್ಥಾನ ಪಡೆಯುತ್ತಿದೆ. ಪ್ಯಾಂಟ್‌ಗಳಲ್ಲೂ ಅದೆಷ್ಟು ತರಾವರಿ..! ಟ್ರೌಸರ್‌ಗಳು ಧರಿಸಲು ಆರಾಮದಾಯಕ, ಆಕರ್ಷಕ. ಹೀಗಾಗಿ ಯುವತಿಯರು ಮಾರುಹೋಗಿರುವುದು ವಿವಿಧ ಬಗೆಯ ಟ್ರೌಸರ್‌ಗಳಿಗೆ.

ಡಾಟೆಡ್, ಹಿಪ್ಪಿ, ಪಲಾಜೊ, ಟ್ಯಾಪರ್ಡ್... ಹೀಗೆ ಟ್ರೌಸರ್‌ಗಳಲ್ಲಿ ಅದೆಷ್ಟು ಬಗೆ, ವಿನ್ಯಾಸ..! ಮಹಿಳೆಯರ ಅಭಿರುಚಿಗೆ ತಕ್ಕಂತೆ ಪಾರ್ಟಿವೇರ್, ಕ್ಯಾಶುವಲ್ ವೇರ್ ಎಂಬ ವೈವಿಧ್ಯತೆಗಳೂ ಇದರಲ್ಲಿ ಲಭ್ಯ.

ಶಾಪಿಂಗ್ ಮಾಲ್‌ಗಳಲ್ಲಿ, ಬಟ್ಟೆ ಅಂಗಡಿಗಳಲ್ಲಿ ಸುಲಭವಾಗಿ ಧರಿಸಿ ಫ್ಯಾಷನೆಬಲ್ ಆಗಿ ಕಾಣಬಲ್ಲ ಟ್ರೌಸರ್‌ಗಳು ಸಿಗುತ್ತವೆ. ಆನ್‌ಲೈನ್‌ಗಳಲ್ಲೂ ಟ್ರೌಸರ್ ವ್ಯಾಪಾರ ಭಾರೀ ಬಿರುಸಾಗಿ ನಡೆದಿದೆ. ಮಹಿಳೆಯರು ಹೆಚ್ಚು ಹೆಚ್ಚು ಇಂತಹ ಟ್ರೌಸರ್‌ಗಳಿಗೇ ಮಾರುಹೋಗಿರುವುದು ಸುಳ್ಳಲ್ಲ.

ತಮ್ಮ ಬಜೆಟ್‌ಗೆ ತಕ್ಕಂತೆ ಶಾಪಿಂಗ್ ಮಾಡಬೇಕೆನ್ನುವ ಬಯಕೆ ಯಾರಿಗೆ ಇರುವುದಿಲ್ಲ ಹೇಳಿ? ದುಬಾರಿ ಬೆಲೆ ತೆತ್ತು ಯಾರೂ ಕೂಡ ಸರಳವಾಗಿ ಕಾಣುವ ದಿರಿಸನ್ನು ಕೊಂಡುಕೊಳ್ಳಲು ಸಿದ್ಧರಿರುವುದಿಲ್ಲ. ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಸಿಂಪಲಾಗಿ ಕಾಣುವ ಬಟ್ಟೆಗಳಿಗೆ ನಾವು ಹೆಚ್ಚು ಹಣ ವ್ಯಯ ಮಾಡಬೇಕಾಗುತ್ತದೆ. ನೋಡಲು ಅಷ್ಟೊಂದು ಆಕರ್ಷಕವಾಗಿರದೇ ಇದ್ದರೂ ಬ್ರ್ಯಾಂಡ್ ಮತ್ತು ಬಟ್ಟೆಯ ಗುಣಮಟ್ಟವನ್ನು ಮೆಚ್ಚಿ ಅದನ್ನು ಖರೀದಿ ಮಾಡುತ್ತೇವೆ.

ಇನ್ನು ಕೆಲವೊಮ್ಮೆ ಮಾಲ್‌ಗಳಲ್ಲಿ ದೊರಕುವ ಬಟ್ಟೆಗಳಂತೆಯೇ ಕಡಿಮೆ ಬೆಲೆಯಲ್ಲಿ ಸ್ಥಳೀಯ ಅಂಗಡಿಗಳಲ್ಲಿ ದೊರಕುತ್ತದೆ. ಅದೇ ಗುಣಮಟ್ಟವನ್ನು ಕಾಯ್ದುಕೊಂಡು ಇವರು ಅದನ್ನು ಮಾರಾಟ ಮಾಡುತ್ತಾರೆ. ಆದರೆ ನಮಗದು ದೊರೆತಿರುವುದಿಲ್ಲ. ನಮ್ಮ ಸ್ನೇಹಿತರು

